0 6

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ಕವಿಪ್ರನಿನಿ/ಬಿ9/4948/2004-05

ದಿನಾಂಕ : 9.12.2014
10 DEC 2014

.................ಅಂಚೆ ರವಾನೆಯಾಗಿದೆ.

## ಸುತ್ತೋಲೆ

**ವಿಷಯ:-** ಕ.ವಿ.ಪ್ರ.ನಿ.ನಿ ಯಿಂದ ಎಸ್ಕಾಂ ಗಳಿಗೆ ಹಾಗೂ ಎಸ್ಕಾಂ ಗಳಿಂದ ಕ.ವಿ.ಪ್ರ.ನಿ.ನಿ ಗೆ ಪರಸ್ಪರ ಪಡೆಯಲು ಇಚ್ಛಿಸಿರುವ ಭೂಮಿಯ ಗುತ್ತಿಗೆ ಕರಾರು ಪತ್ರ ನೋಂದಣಿಗೆ ತಗಲುವ ಮುಂದ್ರಾಕ ಮತ್ತು ನೋಂದಣಿ ಶುಲ್ಕದಲ್ಲಿ ಶೇಕಡ 50 ರಷ್ಟು ವಿನಾಯಿತಿ ನೀಡಿರುವ ಬಗ್ಗೆ.

**ಉಲ್ಲೇಖ:-** 1. ಕವಿಪ್ರನಿನಿ/ಬಿ9/4948/04-05 ದಿನಾಂಕ 27/06/2013.
2. ಕಂದಾಯ ಇಲಾಖೆ (ನೊ ಮತ್ತು ಮು) ಯ ಅಧಿಸೂಚನೆ ಸಂಖ್ಯೆ: ಕಂ.ಇ/44/ಮು.ನೋ.ಮು /2013 ದಿನಾಂಕ 19/11/2014.

*********

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಉಲ್ಲೇಖದಲ್ಲಿನ ಅಧಿಸೂಚನೆಯಲ್ಲಿ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಹಾಗೂ ಎಸ್ಕಾಂಗಳಿಂದ ಕವಿಪ್ರನಿನಿಗೆ ಪರಸ್ಪರ ಮಾಡಿಕೊಳ್ಳುವ ಭೂಮಿಯ ಗುತ್ತಿಗೆ ಕರಾರು ಪತ್ರ (Lease Agreement) ನೋಂದಣಿಗೆ, ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 9 (1) (ಎ) ರನ್ವಯ ಶೇಕಡ 50 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ನೀಡಿ ಆದೇಶಿಸಿದೆ. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ ಆಇ/620/ವೆಚ್ಚ-7/2014 ದಿನಾಂಕ 28/10/2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದ್ದು, ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಅನುಮೋದಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಕವಿಪ್ರನಿನಿಯಿಂದ ಎಸ್ಕಾಂ ಗಳಿಗೆ ಹಾಗೂ ಎಸ್ಕಾಂ ಗಳಿಂದ ಕವಿಪ್ರನಿನಿ ಗೆ ಪರಸ್ಪರ ಮಾಡಿಕೊಳ್ಳುವ ಭೂಮಿಯ ಕರಾರು ಪತ್ರ (Lease Agreement) ನೋಂದಣಿ ಮಾಡಿಸುವಾಗ, ಸದರಿ ಅಧಿಸೂಚನೆಯನ್ವಯ ನೀಡಿರುವ ಶೇಕಡ 50 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿಯನ್ನು ಪಡೆದು, ನೋಂದಣಿ ಮಾಡಿಸಿಕೊಳ್ಳಲು ಸೂಚಿಸಲಾಗಿದೆ.

Sudha 9/12/14
ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ACC-1
Ab
10/12/2014

ಪ್ರತಿಗಳು:-

1. ಎಲ್ಲಾ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ. ಸಂ)/ ಬೆಸ್ಕಾಂ/ಮೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಸೆಸ್ಕ್.
2. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಪ್ರಸರಣ ವಲಯ, ಕವಿಪ್ರನಿನಿ.
3. ಆರ್ಥಿಕ ಸಲಹೆಗಾರರು (ಎ ಮತ್ತು ಆರ್) / (ಅಂ.ಪ.), ಕ.ವಿ.ಪ್ರ.ನಿ.ನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) ಪ್ರಸರಣ ವೃತ್ತ, ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಸದರಿ ಸುತ್ತೋಲೆಯನ್ನು ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
7. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕ.ವಿ.ಪ್ರ.ನಿ.ನಿ.
8. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, (ಆ.ಪ.), ಪ್ರಸರಣ ವಲಯ, ಕ.ವಿ.ಪ್ರ.ನಿ.ನಿ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್ ಎಸ್ ವಿಭಾಗ, ಕವಿಪ್ರನಿನಿ.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ.
11. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ)/(ಆರ್ ಎ) ಮತ್ತು ಕಂ.ಕಾ ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

5033

21957